ಮಯೂರ ವಿಶೇಷ



ಪುರುಷೋತ್ತಮ ಬಿಳಿಮಲೆ

ಕಲೆ: ರೂಪಶ್ರೀ ಕಲ್ಲಿಗನೂರು

# ಮಳೆಯ ಉತ್ತರ ದಕ್ಷಿಣಗಳು

ಕಳೆದ 25 ವರ್ಷಗಳಿಂದ ದೆಹಲಿಯಲ್ಲಿ ವಾಸಿಸುತ್ತಿದ್ದೇನೆ. ದೆಹಲಿಯ ಬಡಗು ದಿಕ್ಕಿನ ರೋಹಿಣಿಯಿಂದ ತೆಂಕು ದಿಕ್ಕಿನ ವಸಂತಕುಂಜದವರೆಗೆ ಓಡಾಟ ಇದ್ದೇ ಇರ್ತದೆ. ಹಾಗೆಯೇ ವಿಶೇಷ ಸಂದರ್ಭದಲ್ಲಿ ಆ ಕಡೆ ನೋಯ್ಡಾ, ಈ ಕಡೆ ಗುರ್ಗಾಂವ್ ಕಡೆ ಓಡಾಡುವುದೂ ಉಂಟು. ಈ ಪ್ರದೇಶಗಳಲ್ಲಿ ಐದು ತಿಂಗಳು ಚಳಿಗಾಲ, ಉಳಿದ ಏಳು ತಿಂಗಳು ಸೆಕೆಗಾಲ. ಚಳಿಗಾಲದಲ್ಲಿ ಎರಡು – ಮೂರು ಡಿಗ್ರಿ ಸೆಂಟಿಗ್ರೇಡ್ ಗೆ ಇಳಿಯುವ ತಾಪಮಾನ, ಬೇಸಿಗೆಯಲ್ಲಿ 45ಕ್ಕೆ ಏರ್ತದೆ. ಈ ನಡುವೆ ಇಲ್ಲಿ ಮಳೆಗಾಲ ಎಂಬುದೇ ಇಲ್ಲ. ಸುಡುಬಿಸಿಲಿನ ಬೇಗೆಯಲ್ಲಿ ಬೇಯುತ್ತಿರುವಾಗ ಊರಿನಲ್ಲಿ ಮಳೆ ಬಂತು ಎಂಬ ಸುದ್ದಿ ಕೇಳಿದರೆ ಅದುವೇ ಸಮಾಧಾನ. ನೈಋತ್ಯ ದಿಕ್ಕಿನಿಂದ ಮೋಡಗಳು ಕೇರಳ ಪ್ರವೇಶಿಸಿ, ಮಂಗಳೂರು ದಾಟಿ, ಕೊಂಕಣ ದಾಟುವಾಗ ಅಲ್ಲೆಲ್ಲ ಮಳೆಯಾಗುತ್ತದೆ. ಆದರೆ ಆ ಮೋಡಗಳು ವಿಂಧ್ಯಾ ಪರ್ವತ ದಾಟಿ ಉತ್ತರ ಭಾರತ ತಲುಪುವಷ್ಟರಲ್ಲಿ ದಣಿದಿರುತ್ತವೆ. ದೆಹಲಿ ಮುಟ್ಟುವ ತ್ರಾಣವೇ ಅವಕ್ಕಿರುವುದಿಲ್ಲ. ಪುಣ್ಯಕ್ಕೆ ಕಾಳಿದಾಸನ ಮೇಘದೂತದ ಯಕ್ಷನೊಬ್ಬನಿಗೆ ವಿಂಧ್ಯಾ ಪರ್ವತದಿಂದ ಹಿಮಾಲಯದ ಅಲಕಾವತಿಯಲ್ಲಿರುವ ತನ್ನ ಪ್ರೇಯಸಿಗೆ ಪ್ರೇಮ ಸಂದೇಶವನ್ನು ಕಳಿಸಲು ಮಳೆಗಾಲದ ಮೋಡವೊಂದು ಸಿಕ್ಕಿಬಿಟ್ಟಿತ್ತು. ಮೋಡ ನೋಡುತ್ತಲೇ ಯಕ್ಷನ ವಿರಹವೂ ಹೆಚ್ಚಾಗಿ ಅದೊಂದು ಅದ್ಭುತ ಪ್ರಣಯ ನಿವೇದನೆಯ ಕಾವ್ಯವಾಯಿತು. ಇದನ್ನು ಓದಿಕೊಂಡು 'ಮಳೆಗಾಲದ ಮೋಡಗಳು

